ಕೂಡ ಈ ಪ್ಲಾನ್ ಒಳಗಡೆ ಆ ಶವ ಪರೀಣಾ ಕೇಂದ್ರವನ್ನು ಅಳವಡಿಸುವುದಕ್ಕೆ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ನಾವು ಸೂಚನೆಯನ್ನು ಕೊಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಈಗ ಕಟ್ಟುತ್ತಿರುವಂಥ ಆಸ್ಪತ್ರೆಯ ಕಟ್ಟಡದ ಒರಿಜನಲ್ ಪ್ಲಾನಸಲ್ಲಿ ಶವ ಪರೀಕ್ಷಣಾ ಕೇಂದ್ರದ ಕೊಠಡಿ ಇದೆ. ಆದರೆ ಕಳೆದ ಅನೇಕ ವರ್ಷಗಳಿಂದ ಕಟ್ಟಡದ ಕೆಲಸ ಮಂದಗತಿಯಲ್ಲಿ ಸಾಗುತ್ತಿದ್ದು ಬಹಳ ನೆನೆಗುದಿಗೆ ಬಿದ್ದಿದೆ. ಈ ಕಟ್ಟಡ ಪೂರ್ಣವಾಗುವುದಕ್ಕೆ ಇನ್ನೂ 4-5 ವರ್ಷಗಳು ಆಗಬಹುದು. ಹಾಗಾಗಿ ಆ 4-5 ವರ್ಷಗಳ ಕಾಲ ರಸ್ತೆಯ ಬದಿಯಲ್ಲೆ ಶವ ಪರೀಕ್ಷೆಯನ್ನು ಮಾಡುವುದು ಎಂದರೆ ಬಹಳ ದುಸ್ತರವಾದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಶವ ಪರೀಕ್ಷೆ ಕೊಠಡಿಯನ್ನಾದರೂ ಬೇಗನೆ ಕಟ್ಟಿಸುವ ಬಗ್ಗೆಯಾದರೂ ಯೋಚನೆ ಮಾಡಬೇಕು.

ಶ್ರೀ ಎಂ. ಸಿ. ನಾಣಯ್ಯ : ತಾವು ಹೇಳಿದಹಾಗೆ ಈ ಶವ ಪರೀಕ್ಷೆಯ ಕೊಠಡಿಯೂ ಕೂಡ ಈ ಪ್ಲಾನಿನ ಒಳಗಡೆ ಇರುವುದರಿಂದ ಆ ಕಟ್ಟಡವನ್ನು ಬೇಗ ಕಟ್ಟುವುದಕ್ಕೆ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಬೇಗೆ ಎಂದರೆ ಯಾವಾಗ?

SRI M.C. NANAIAH : I really share your concern. I will see that instructions are issued to the Engineers see postmortem block is taken up immediately along with other work.

MR. SPEAKER : It is more of auguish than the concern.

ಬೀಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾದಳಗಿಯಲ್ಲಿ 30 ಹಾಸಿಗೆಯುಳ್ಳ ಆಸ್ಪತ್ರೆ.

90 - ಶ್ರೀ ಜೆ.ಪಿ. ಪಾಟೀಲ್ (ಬೀಳಗಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ 30 ಹಾಸಿಗೆ ಆಸ್ಪತ್ರೆ ಬೇಡಿಕೆ ಜನರಿಂದ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಾವಳಗಿ ಕನಿಷ್ಟ 15 ಸಾವಿರ ಜನಸಂಖ್ಯೆ ಹೊಂದಿರುವುದಲ್ಲದೆ ಸುತ್ತಮುತ್ತಲು ಕನಿಷ್ಟ 20-25 ಹಳ್ಳಿಗಳು ಈ ದವಾಖಾನೆಯ ಮೇಲೆ ಅವಲಂಭಿತವಾಗಿರುವುದು ಸರ್ಕಾರದ ಗಮನಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗೆ ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮಗಳೇನು? ಇದೇ 1996-97ನೇ ಸಾಲಿನಲ್ಲಿಯೇ ಮಂಜೂರು ಮಾಡಲಾಗುವುದೇ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಬಂದಿರುತ್ತದೆ.

ಇ) ಇನ್ನೂ ತೀರ್ಮಾನಿಸಿಲ್ಲ.

ಶ್ರೀ ಜೆ. ಟಿ. ಪಾಟೀಲ್ : ಇದರ ಬಗ್ಗೆ ಕಳೆದ ಫೆಬ್ರವರಿಯಲ್ಲೂ ಸಹಿತ ಇದೇ ಪ್ರಶ್ನೆಯನ್ನು ಕೇಳಿದಾಗ ಇದೇ ಉತ್ತರ ಬಂದಿತ್ತು. ಅಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಈ ಸಾವಳಗಿ ಗ್ರಾಮ ನನ್ನ ತಾಲ್ಲೂಕಿನ ಕೇಂದ್ರಸ್ಥಳವಾದ ಬೀಳಗಿಯಲ್ಲಿ ಎಷ್ಟು ಜನಸಂಖ್ಯೆ ಇದೆ ಅಷ್ಟೇ ಜನಸಂಖ್ಯೆ ಇರುವಂಥ ಗ್ರಾಮ. ಇದರ ಸುತ್ತಮುತ್ತಲೂ 20-25 ಹಳ್ಳಿಗಳು ಇವೆ. ಇರುವಂಥ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಯಾವುದೇ ಸರಿಯಾದ ವ್ಯವಸ್ಥೆಗಳಿಲ್ಲ. ಆದಕಾರಣ ಅದನ್ನು 30ಹಾಸಿಗೆಗೆ ಮೇಲ್ದರ್ಜೆಗೇರಿಸುವ ಬಗ್ಗೆ ತಾವು ಯಾವಾಗ ಕ್ರಮವನ್ನು ಕೈಗೊಳ್ಳುತ್ತೀರಿ ಎನ್ನುವಂಥ ಒಂದು ಸ್ಪಷ್ಟವಾದ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧಕ್ಷರೇ, ಈಗಿರತಕ್ಕಂಥ ಬೀಳಗಿ ಕ್ಷೇತ್ರದಿಂದ ಇನ್ನೊಂದು ಆರೋಗ್ಯ ಕೇಂದ್ರವು ಜಮಖಂಡಿ ಪಟ್ಟಣದಲ್ಲಿ ಅಂದರೆ 24 ಕಿಲೋ ಮೀಟರ್ ದೂರದಲ್ಲಿದೆ. ಇದನ್ನು ಸ್ವಲ್ಪ ಮೇಲ್ದರ್ಜೆಗೇರಿಸಬೇಕು ಎಂದು ಕೇಳಿದ್ದೀರಿ. ಮುಂದಿನ ಸಾಲಿಗೆ ಇದನ್ನು ಸೇರಿಸುವುದಕ್ಕೆ ಅರ್ಹವಾಗಿರತಕ್ಕಂಥ ಪಟ್ಟಣ ಎಂದು ನನ್ನ ಗಮನಕ್ಕೂ ಕೂಡ ಬಂದಿದೆ ಇದರ ಬಗ್ಗೆ ನಾನು ಖಂಡಿತ ಪರಿಶೀಲನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 134 ಪ್ರಶ್ನೆಗಳ ಪೈಕಿ 98 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಿದ್ದೇನೆ.

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಕುರಿತು.

331 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರ ಹುದ್ದೆಗಳೆಷ್ಟು (ಖಾಲಿ) ಇವುಗಳನ್ನು ಎಷ್ಟು ಕಾಲಾವಧಿಯಲ್ಲಿ ಭರ್ತಿ ಮಾಡಲಾಗುವುದು. ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 187 ಸಂಗೀತ ಶಿಕ್ಷಕರ ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 8,931 ಪ್ರಾಥಮಿಕ